<u>ಕರ್ನಾಟಕ ಸರ್ಕಾರದ ನಡವಳಿಗಳು</u>

ವಿಷಯ: ಹೊಸ ಪ್ಯಾರಾ ಮೆಡಿಕಲ್ ಸಂಸ್ಥೆಗಳು/ನರ್ಸಿಂಗ್ ಶಾಲೆಗಳನ್ನು ಪ್ರಾರಂಭಿಸುವ ಸಂಬಂಧ ಹಾಗೂ ಈ ಕೋರ್ಸುಗಳ ಪ್ರವೇಶಾತಿಗೆ ಹಾಗೂ ಪರೀಕ್ಷೆಗಳಿಗೆ calendar of events ಪ್ರಕಟಿಸುವ ಬಗ್ಗೆ.

ಓದಲಾಗಿದೆ: ವಿಶೇಷಾಧಿಕಾರಿಗಳು, ಕರ್ನಾಟಕ ಶುಶ್ರೂಷಾ ಮತ್ತು ಅರೆ ವೈದ್ಯಕೀಯ ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ ಇವರ ಪತ್ರ ಸಂಖ್ಯೆ: ಪಿಎಂಬಿ/28/17-18 ದಿನಾಂಕ: 17-01-2018 ಮತ್ತು ಕ.ರಾ.ಶು.ಪ.ಮಂ/ ಸಿಬ್ಬಂದಿ/68/2015-16 ದಿನಾಂಕ: 08-02-2018.

******

<u>ಪ್ರಸ್ತಾವನೆ:</u>

ರಾಜ್ಯದಲ್ಲಿನ ನರ್ಸಿಂಗ್ ಮತ್ತು ಅರೆ ವೈದ್ಯಕೀಯ ಶಿಕ್ಷಣ ಹಾಗೂ ಅವುಗಳಿಗೆ ಸಂಬಂಧಿಸಿದ ಅಥವಾ ಅವುಗಳಿಗೆ ಅನುಷಂಗಿಕವಾದ ವಿಷಯಗಳನ್ನು ನಿಯಂತ್ರಿಸಲು ಕರ್ನಾಟಕ ನರ್ಸಿಂಗ್ ಮತ್ತು ಅರೆ ವೈದ್ಯಕೀಯ ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ, 2012ನ್ನು ದಿನಾಂಕ: 30-01-2013 ರಿಂದ ಜಾರಿಗೆ ತರಲಾಗಿದೆ. ಈ ಪ್ರಾಧಿಕಾರವು ನರ್ಸಿಂಗ್ ಶಿಕ್ಷಣ ನೀಡುತ್ತಿರುವ ಶಾಲೆಗಳು ಮತ್ತು ಅರೆ ವೈದ್ಯಕೀಯ ವಿಜ್ಞಾನಗಳ ಶಿಕ್ಷಣ ನೀಡುತ್ತಿರುವ ಸಂಸ್ಥೆಗಳನ್ನು ನಿಯಂತ್ರಿಸುವುದು, ಮನ್ನಣೆಯನ್ನು ನೀಡುವುದು ಮತ್ತು ಗುಣಮಟ್ಟಗಳನ್ನು ಕಾಪಾಡುವುದು ಪ್ರಾಧಿಕಾರದ ಉದ್ದೇಶವಾಗಿರುತ್ತದೆ.

ಪ್ರಸ್ತುತ ರಾಜ್ಯದಲ್ಲಿ 31 ಸರ್ಕಾರಿ ಪ್ಯಾರಾ ಮೆಡಿಕಲ್ ಸಂಸ್ಥೆಗಳು ಹಾಗೂ 289 ಖಾಸಗಿ ಪ್ಯಾರಾ ಮೆಡಿಕಲ್ ಸಂಸ್ಥೆಗಳು, 18 ಸರ್ಕಾರಿ ನರ್ಸಿಂಗ್ ಶಾಲೆಗಳು ಹಾಗೂ 322 ಖಾಸಗಿ ನರ್ಸಿಂಗ್ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಹೊಸ ಪ್ಯಾರಾ ಮೆಡಿಕಲ್ ಸಂಸ್ಥೆಗಳು/ನರ್ಸಿಂಗ್ ಶಾಲೆಗಳನ್ನು ಪ್ರಾರಂಭಿಸಲು ಹಾಗೂ ಹಾಲಿ ಇರುವ ಪ್ಯಾರಾ ಮೆಡಿಕಲ್ / ನರ್ಸಿಂಗ್ ಶಾಲೆಗಳಲ್ಲಿ ಹೆಚ್ಚುವರಿ ಕೋರ್ಸುಗಳನ್ನು ಪ್ರಾರಂಭಿಸಲು ಹಾಗೂ ಪ್ರವೇಶಮಿತಿಯನ್ನು ಹೆಚ್ಚಿಸಲು ಪ್ರಸ್ತಾವನೆಗಳನ್ನು ನಿಗದಿತ ಕಾಲಾವಧಿಯಲ್ಲಿ ಸರ್ಕಾರಕ್ಕೆ ಸಲ್ಲಿಸದ ಕಾರಣ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ ಸೂಕ್ತ ನಿರ್ಣಯಗಳನ್ನು ಸಕಾಲದಲ್ಲಿ ಕೈಗೊಳ್ಳಲು ಸಾಧ್ಯವಾಗದಿರುವುದನ್ನು ಸರ್ಕಾರ ಗಮನಿಸಿದೆ. ಇದರಿಂದಾಗಿ ಪ್ಯಾರಾ ಮೆಡಿಕಲ್/ನರ್ಸಿಂಗ್ ಕೋರ್ಸುಗಳಿಗೆ ನಿಗದಿತ ವೇಳೆಯಲ್ಲಿ ಪ್ರವೇಶಾತಿಗಳು ಹಾಗೂ ಪರೀಕ್ಷೆಗಳು ನಡೆಯದೇ ಈ ಕೋರ್ಸುಗಳಿಗೆ ಪ್ರವೇಶಾತಿ ಹೊಂದಬಯಸುವ ವಿದ್ಯಾರ್ಥಿಗಳಿಗೆ ಗೊಂದಲ ಉಂಟಾಗುತ್ತಿರುವುದಲ್ಲದೆ, ಈ ಕೋರ್ಸುಗಳಿಗೆ ಕಡಿಮೆ ಪ್ರಮಾಣದಲ್ಲಿ ಪ್ರವೇಶಾತಿಯಾಗುತ್ತಿರುವುದನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿ, ಈ ಕೋರ್ಸುಗಳಿಗೆ ಸಂಬಂಧಿಸಿದಂತೆ ನಿಗದಿತ ವೇಳಾ ಪಟ್ಟಿಯನ್ನು ಜಾರಿಗೊಳಿಸಲು ಸರ್ಕಾರವು ತೀರ್ಮಾನಿಸಿ, ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಆಕುಕ 63 ಎಂಎಂಸಿ 2018, ಬೆಂಗಳೂರು, ದಿನಾಂಕ: 06-03-2018</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಹೊಸ ಪ್ಯಾರಾ ಮೆಡಿಕಲ್ ಸಂಸ್ಥೆಗಳು/ನರ್ಸಿಂಗ್ ಶಾಲೆಗಳನ್ನು ಪ್ರಾರಂಭಿಸಲು ಹಾಗೂ ಹಾಲಿ ಇರುವ ಪ್ಯಾರಾ ಮೆಡಿಕಲ್ ಸಂಸ್ಥೆ / ನರ್ಸಿಂಗ್ ಶಾಲೆಗಳಲ್ಲಿ

Govt. ... D.M.E. Para Medical Board ... 6463 19 MAR 2018

ಹೆಚ್ಚುವರಿ ಕೋರ್ಸುಗಳನ್ನು ಪ್ರಾರಂಭಿಸಲು, ಪ್ರವೇಶಮಿತಿಯನ್ನು ಹೆಚ್ಚಿಸಲು ಮತ್ತು ಈ ಕೋರ್ಸುಗಳಿಗೆ ಪ್ರವೇಶಾತಿ ಹಾಗೂ ಪರೀಕ್ಷೆಗಳನ್ನು ನಡೆಸಲು ಅನುವಾಗುವಂತೆ. ವಾರ್ಷಿಕ ವೇಳಾ ಪಟ್ಟಿಯನ್ನು (calendar of events) ಕೆಳಕಂಡಂತೆ ನಿಗದಿಗೊಳಿಸಿ ಆದೇಶಿಸಿದೆ.

<u>ಪ್ಯಾರಾ ಮೆಡಿಕಲ್ ಮತ್ತು ಜಿ.ಎನ್.ಎಂ. ನರ್ಸಿಂಗ್ ಕೋರ್ಸುಗಳು</u>

**CALENDAR OF EVENTS (ACADEMIC)**

| | | | |
|---|---|---|---|
| 1 | Calling application for admission to Para Medical/Nursing Courses in Government Colleges and Government quota in private Para Medical Colleges | | Not later than 10th July. |
| 2. | Dates(s) of counseling for admission to Para Medical / Nursing Courses in Govt. Medical/Dental Colleges & Govt. Quota in Private institutions | | Between 10th to 31st July. |
| 3. | Last Date for admission to any Para Medical / Nursing Courses | | 31st of August. |
| 4. | Date of Starting of Class | | 1st of September |
| 5. | Last Date for Submitting the list of admitted candidates as on 31-08-2017 along with Registration Forms, Photo, Registration Fee with following original documents SSLC/PUC Marks Card, TC, Study Certificate, Caste Certificate, Migration Certificate from Competent authority<br>Foreign students: Certificate from embassy of concern Competent authority (To whom so ever it may concern) | Without penalty (Registration Fee Rs.500/- Per Candidate) | 30th of September |
| | | With penalty of Rs.200/- per candidate | 15th of October |

**CALENDER OF EVENTS FOR OPENING NEW COLLEGES**

| | |
|---|---|
| 1. Issue of notification for online Application to *open new colleges*/**additional courses/Additional seats** | Before 10th of December |
| 2. Submission of Online application for new colleges/courses/enhancement of seats | Before 31st of January |
| 3. Inspection by LIC | Before 31st of March |
| 4. Submission of report of Government | Before 15th of April |
| 5. Scrutiny of proposals by High Power Committee at Govt. | Before 15th of May |
| 6. Submission of proposal to cabinet Sub-Committee | Before 15th of June. |
| 7. Communication of decision by Govt | Before 10th of July |
| 8. Start of students admission process | 10th July |

**CALENDAR OF EVENTS FOR EXAMINATION**

| | |
|---|---|
| **1. Issue of Examination Notification** | |
| (a) Annual | Before 30th of Aug |
| (b) Supplementary | Before 31st of January |
| **2. Last date for Submission of application for examination:** | |
| (a) Annual – Without Fine | 1st of August |
| With Fine | 25th of August |
| (Fine Rs.15/ per day per Candidate | |
| (b)Supplementary – Without Fine | 20th of January |
| With Fine | 25th of January |
| (Fine Rs.15/-per day per Candidate | |

| | | |
|---|---|---|
| **3. Examinations** | | |
| (a) Annual | Before 25th of September | Subject to change of Date with RGUHS Examination |
| (b) Supplementary | Before 20th of February | |
| **4. Announcement of Results:** | | |
| Annual | Before 31st of November | |
| Supplementary | Before 31st March | |
| **5. Issue of Marks Card** | | |
| Annual | Before 31st of January | |
| Supplementary | Before 30th June | |
| **6. Issue of Diploma Certificates** | | |
| Annual | End of February | |
| Supplementary | Before 31st of July | |

**Note:** *To open new colleges, Trust / Societies must have completed minimum of 3 years*
* / ** To apply for new courses & additional seats, minimum 1 batch students has to complete the course**
*** 4 to 7 for the official use only ***

ಸದರಿ ವೇಳಾ ಪಟ್ಟಿಯಲ್ಲಿನ ಕಾಲಾನುಕ್ರಮಣಿಕೆಯನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. ತಪ್ಪಿದಲ್ಲಿ, ನರ್ಸಿಂಗ್ ಮತ್ತು ಅರೆ ವೈದ್ಯಕೀಯ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರದ ಸಂಬಂಧಿತ ಅಧಿಕಾರಿ / ನೌಕರರುಗಳನ್ನು ಜವಾಬ್ದಾರರನ್ನಾಗಿಸಿ, ಅವರ ವಿರುದ್ಧ ನಿಯಮಾನುಸಾರ ಸೂಕ್ತ ಕ್ರಮ ಜರುಗಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಂ.ಬಿ.ಧೋತ್ರೆ)
ಸರ್ಕಾರದ ಅಧೀನ ಕಾರ್ಯದರ್ಶಿ-2,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
(ವೈದ್ಯಕೀಯ ಶಿಕ್ಷಣ)

ಇವರಿಗೆ:

1. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು-560009.
2. ವಿಶೇಷಾಧಿಕಾರಿಗಳು, ಕರ್ನಾಟಕ ನರ್ಸಿಂಗ್ & ಅರೆ ವೈದ್ಯಕೀಯ ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ, ಲಕ್ಷ್ಮಿ ಕಾಂಪ್ಲೆಕ್ಸ್, 1ನೇ ಮಹಡಿ, ವಾಣಿವಿಲಾಸ ಆಸ್ಪತ್ರೆ ಎದುರು, ಬೆಂಗಳೂರು – 560 002.
3. ಸದಸ್ಯ ಕಾರ್ಯದರ್ಶಿಗಳು, ಪ್ಯಾರಾ ಮೆಡಿಕಲ್ ಬೋರ್ಡ್, ಬೆಂಗಳೂರು.
4. ರಿಜಿಸ್ಟ್ರಾರ್, ಕರ್ನಾಟಕ ರಾಜ್ಯ ನರ್ಸಿಂಗ್ ಪರಿಷತ್ತು, ಬೆಂಗಳೂರು.
5. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

<u>ಪ್ರತಿ ಮಾಹಿತಿಗಾಗಿ:</u>

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ.
2. ಸರ್ಕಾರದ ಉಪ ಕಾರ್ಯದರ್ಶಿಗಳ ಆಪ್ತ ಸಹಾಯಕರು, ವೈದ್ಯಕೀಯ ಶಿಕ್ಷಣ ಇಲಾಖೆ

ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ
ಜಿ.ಆರ್.ಆರ್. ನಂ:...... 47
31 MAR 2018
31/03/2018
ಬೆಂಗಳೂರು – 09

ಕರ್ನಾಟಕ ಸರ್ಕಾರ

ಸಂಖ್ಯೆ: ಆಕುಕ 63 ಎಂಎಂಸಿ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 22-03-2018

ತಿದ್ದುಪಡಿ ಆದೇಶ

ಸರ್ಕಾರದ ಆದೇಶ ಸಂಖ್ಯೆ: ಆಕುಕ 63 ಎಂಎಂಸಿ 2018 ದಿನಾಂಕ: 06-03-2018 ರ ಆದೇಶ ಭಾಗದ ನಂತರ ನಮೂದಿಸಿರುವ ಪರೀಕ್ಷಾ ವೇಳಾ ಪಟ್ಟಿಯನ್ನು (Calendar of events for examination) ಕೆಳಕಂಡಂತೆ ತಿದ್ದಿ ಓದಿಕೊಳ್ಳತಕ್ಕದ್ದು.

| CALENDAR OF EVENTS FOR EXAMINATION | | |
|---|---|---|
| **1. Issue of Examination Notification** | | |
| (a) Annual | Before 30th of **June** | |
| (b) Supplementary | Before 31st of **December** | |
| **2. Last date for Submission of application for examination:** | | |
| (a) Annual – Without Fine | **1st to 20th of July** | |
| With Fine | **21st to 25th of July** | |
| (Fine Rs.15/ per day per Candidate | | |
| (b)Supplementary – Without Fine | **1st to 20th of January** | |
| With Fine | **21st to 25th of January** | |
| (Fine Rs.15/-per day per Candidate | | |
| **3. Examinations** | | |
| (a) Annual | Before 25th of **August** | Subject to change of Date with RGUHS Examination |
| (b) Supplementary | Before 20th of February | |
| **4. Announcement of Results:** | | |
| Annual | Before 31st of **October** | |
| Supplementary | Before 31st March | |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಂ.ಬಿ.ಧೋತ್ರೆ)
ಸರ್ಕಾರದ ಅಧೀನ ಕಾರ್ಯದರ್ಶಿ-2,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
(ವೈದ್ಯಕೀಯ ಶಿಕ್ಷಣ)

Govt. of Karnataka
33
05 APR 2018
D.M.E.

PMB

ಇವರಿಗೆ
1. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು.